**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 18.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ.ಎಸ್ ವಿ ಪಿ ವಕೀಲರಿಂದಃ**

ನನ್ನ ಮಾವನ ಹೆಸರು ಅನಂತಕೃಷ್ಣಭಟ್ ಉಚಿಲಾ. ನನ್ನ ಮಾವನವರಿಗೆ 3 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಅವರೆಂದರೆ ರಾಮಚಂದ್ರ, ವ್ಯಾಸ, ರಮೇಶ, ಸಾವಿತ್ರಿ ಮತ್ತು ಗಾಯತ್ರಿ ಎಂದರೆ ಸರಿ. 1970 ರಲ್ಲಿ ನನ್ನ ಗಂಡ ಹಾಗೂ ಅವರ ಸಹೋದರರು ಏಕತ್ರ ಕುಟುಂಬದ ಆಸ್ತಿಗಳನ್ನು ಪಾಲುವಿಭಾಗ ಮಾಡಿಕೊಂಡರು ಎಂದರೆ ಸರಿ. ಆ ಸಮಯದಲ್ಲಿ ಎರಡು ದೊಡ್ಡ ಹೊಟೇಲ್ ಹಾಗೂ ಒಂದು ಚಿಕ್ಕ ರೆಸ್ಟೋರೆಂಟ್ ಹಾಗೂ ಅನಂತರ ರೆಸಿಡೆನ್ಸಿ ಹೊಟೇಲ್ ಹಾಗೂ ಎರಡು ಪಾರ್ಟನರ್ ಶಿಪ್ ಫರ್ಮಗಳನ್ನು ಪಾಲು ಮಾಡಿಕೊಂಡಿರುತ್ತಾರೆ. ಸದರಿ ಪಾಲು ವಿಭಾಗದಲ್ಲಿ ನನ್ನ ಗಂಡನಿಗೆ ವುಡ್ ಲ್ಯಾಂಡ್ಸ ಹೊಟೇಲ್ 1 ಎಕರೆ 9 ಗುಂಟೆ ಜಮೀನು ಹಾಗೂ ಸಾಲ ಸಹ ಬಂದಿರುತ್ತದೆ. ನನ್ನ ಗಂಡನಿಗೆ ಸಾಲ ತೀರಿಸುವ ಜವಾಬ್ದಾರಿ ಸಹ ಬಂದಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರ ನನ್ನ ಹತ್ತಿರ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ನನಗೆ ತೊಂದರೆ ಇಲ್ಲ. 1 ಎಕರೆ 9 ಗುಂಟೆ ಜಮೀನಿನಲ್ಲಿ ವುಡ್ ಲ್ಯಾಂಡ್ಸ ಹೊಟೇಲ್ ಇತ್ತು ಎಂದರೆ ಸರಿ. ಸದರಿ ಹೊಟೇಲ್ ನಾಮಾಂಕಿತ ಹೊಟೇಲ್ ಆಗಿತ್ತು ಎಂದರೆ ಸರಿ. ಅದೇ ರೀತಿ ಸದರಿ ವಾಟ್ನಿ ಪ್ರಕಾರ ನಿಮ್ಮ ಗಂಡನಿಗೆ ಆದರ್ಶ ನಗರದಲ್ಲಿ ಒಂದು ಸೈಟ್ ಸಹ ನೀಡಲಾಗಿತ್ತು ಎಂದರೆ ಸಾಕ್ಷಿ ಹೌದು ನಮ್ಮ ಮಾವ ಇದ್ದಾಗ ನಾವು ಮನೆ ಸಹ ಕಟ್ಟಿದೇವು ಎಂದು ನುಡಿಯುತ್ತಾರೆ. ಸದರಿ ನಿವೇಶನ 5 ಗುಂಟೆ ಕ್ಷೇತ್ರದ್ದು ಆಗಿತ್ತು. ನನ್ನ ಗಂಡ

ವುಡ್ ಲ್ಯಾಂಡ್ಸ ಹೊಟೇಲ್ ನ ವ್ಯವಹಾರ ನೋಡಿಕೊಳ್ಳುತ್ತಿದ್ದರು. ನನ್ನ ಗಂಡನಿಗೆ ಹೊಟೇಲ್ ವ್ಯವಹಾರ ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲಗಳು ಇರಲಿಲ್ಲ. ಸದರಿ ಹೊಟೇಲ್ ಆದಾಯದಿಂದ ಅವರು ಮನೆ ಕಟ್ಟಿದರು, ಬೆಳ್ಳಿ ಬಂಗಾರ ಮಾಡಿದರು ಮತ್ತು ವಾಹನ ಹಾಗೂ ಇತರೆ ಆಸ್ತಿಗಳನ್ನು ಖರೀದಿಸಿದರು ಎಂದರೆ ಸಾಕ್ಷಿ ಬೆಳ್ಳಿ ಬಂಗಾರವನ್ನು ನನ್ನ ತವರು ಮನೆಯವರೇ ನನಗೆ ನೀಡಿರುತ್ತಾರೆಂದು ನುಡಿಯುತ್ತಾರೆ.

2. 1968 ರಲ್ಲಿ ನನ್ನ ಮದುವೆ ತಿರುಪತಿಯಲ್ಲಿ ಆಗಿರುತ್ತದೆ. ನಿಮ್ಮ ಮದುವೆಯನ್ನು ನಿಮ್ಮ ತಂದೆ ತಾಯಿ ಮಾಡಿಲ್ಲ ಎಂದರೆ ಸಾಕ್ಷಿ ನನ್ನ ಅಣ್ಣ ಅತ್ತಿಗೆ, ಅತ್ತೆ ಮಾವ, ಎಲ್ಲರೂ ಬಂದಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಮದುವೆ ಪ್ರೇಮ ವಿವಾಹ ಆಗಿತ್ತು ಎಂದರೆ ಸಾಕ್ಷಿ ಪ್ರೇಮ ವಿವಾಹ ಹಾಗೂ ಅರೆಂಜ್ ಮ್ಯಾರೇಜ್ ಎರಡು ಸಹ ಆಗಿತ್ತು ಎಂದು ನುಡಿಯುತ್ತಾರೆ. ನನ್ನ ಮದುವೆಯನ್ನು ನಮ್ಮ ತಂದೆ ತಾಯಿ ಮಾಡಿಕೊಟ್ಟಿಲ್ಲ ಹಾಗಾಗಿ ಅವರು ನನಗೆ ಬೆಳ್ಳಿ ಬಂಗಾರ ಕೊಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ಅವರು ಹುಷಾರಿಲ್ಲದ ಕಾರಣ ಅವರು ಬರಲಿಲ್ಲ ಆದರೆ ಅವರೇ ಮದುವೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರು ಜಲಜಾಕ್ಷಿ ಶ್ರೀನಿವಾಸ ಆಚಾರ. ನನ್ನ ತಂದೆ ತಾಯಿಯ ಇಚ್ಛೆಯ ವಿರುದ್ಧ ತಿರುಪತಿಯಲ್ಲಿ ಮದುವೆಯಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯ ಇಚ್ಛೆಯ ವಿರುದ್ಧ ನಾನು ಮದುವೆಯಾದ ಕಾರಣ ಅವರು ನನಗೆ ಯಾವುದೇ ಆಭರಣಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಹತ್ತಿರ ಇದ್ದ ಎಲ್ಲ ಆಭರಣಗಳನ್ನು ನನ್ನ ಗಂಡ ಖರೀದಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ಆದರ್ಶ ನಗರದಲ್ಲಿರುವ ಮನೆಯನ್ನು ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಮನೆಯನ್ನು ಸುಮಾರು 26 ಲಕ್ಷಗಳಿಗೆ ಮಾರಾಟ ಮಾಡಿರುತ್ತೇವೆ. 2000

ಅಥವಾ 2001 ನೇ ಇಸ್ವಿಯಲ್ಲಿ ಮಾರಾಟ ಮಾಡಿರುತ್ತೇವೆ. ಸದರಿ ಮನೆ ಆದರ್ಶ ನಗರ ಮುಖ್ಯರಸ್ತೆಗೆ ಹತ್ತಿಕೊಂಡ ಮನೆ ಎಂದರೆ ಸರಿ. ಆದರ್ಶ ನಗರ ಹುಬ್ಬಳ್ಳಿಯ ನಾಮಾಂಕಿತ ಪ್ರದೇಶ ಎಂದರೆ ಸರಿ. ಸದರಿ ಸಮಯದಲ್ಲಿ ಆ ಆಸ್ತಿಯ ಬೆಲೆ 50 ರಿಂದ 60 ಲಕ್ಷ ಇತ್ತು ಎಂದರೆ ಸಾಕ್ಷಿ ಇರಲಿಲ್ಲ ಎಂದು ನುಡಿಯುತ್ತಾರೆ. 2001 ರಲ್ಲಿ ಸದರಿ ಆಸ್ತಿಗೆ 60 ಲಕ್ಷ ರೂ. ಬರುತ್ತಿತ್ತು ಅದನ್ನು ಕಡಿಮೆ ಬೆಲೆಗೆ ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಬೇಕಾದರೆ ನಿಮ್ಮ ಮಕ್ಕಳ ಅನುಮತಿಯನ್ನು ನೀವು ಪಡೆದಿದ್ದಿರಾ ಎಂದರೆ ಸಾಕ್ಷಿ ಅದು ನಮ್ಮ ಸ್ವಂತ ಆಸ್ತಿ ನಮ್ಮ ಮಕ್ಕಳು ಚಿಕ್ಕವರಿದ್ದರು ಹಾಗೂ ಸಾಲ ತೀರಿಸಬೇಕೆಂದು ನಾವು ಅದನ್ನು ಮಾರಾಟ ಮಾಡಿರುತ್ತೆವೆಂದು ನುಡಿಯುತ್ತಾರೆ. ಸದರಿ ಆಸ್ತಿ ಅನಂತಭಟ್ ಇವರ ಕಡೆಯಿಂದ ನಿಮಗೆ ಬಂದಿರುತ್ತದೆ ಎಂದರೆ ಸಾಕ್ಷಿ ನನ್ನ ಗಂಡ ಅವರ ತಂದೆ ಅವರಿಗೆ ಹೊಟೇಲ್ ನಲ್ಲಿ ಕೆಲಸ ಮಾಡಿದ ನೌಕರಿಯ ವಿಷಯವಾಗಿ ನೀಡಿದ ಹಣದಿಂದ ಕಟ್ಟಿಸಿರುತ್ತಾರೆಂದು ನುಡಿಯುತ್ತಾರೆ. ಸದರಿ ಜಾಗ ಅನಂತಭಟ್ ಇವರ ಜಾಗ ಎಂದರೆ ಸಾಕ್ಷಿ ಇಲ್ಲ ಅನಂತ ಭಟ್ ರವರೇ ಜೀವಂತವಿದ್ದಾಗ ನನ್ನ ಗಂಡನ ಹೆಸರಿಗೆ ನೊಂದಣಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

4. ವುಡ್ ಲ್ಯಾಂಡ್ಸ ಹೊಟೇಲ್ ಇರುವ ಒಂದು ಎಕರೆ 9 ಗುಂಟೆ ಜಾಗದ ಪೈಕಿ 10 ಗುಂಟೆ ಜಾಗವನ್ನು ನೀವು ಮದನಲಾಲ ಕಟಾರಿಯಾ ಇವರಿಗೆ ಮಾರಾಟ ಮಾಡಿರುತ್ತಿರಿ ಎಂದರೆ ಸಾಕ್ಷಿ ಸಾಲ ಇದ್ದ ಕಾರಣ ಮಾರಾಟ ಮಾಡಿರುತ್ತೇವೆ ಹಾಗೂ ಉಳಿದ ಹಣವನ್ನು ನನ್ನ ಮಗನಿಗೆ ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಒಂದು ಒಳ್ಳೆಯ ಬೆಲೆ ಬಾಳುವ ಆಸ್ತಿ ಎಂದರೆ ಸರಿ. ಅದನ್ನು 2005 ರಲ್ಲಿ 97 ಲಕ್ಷಕ್ಕೆ ಮಾರಾಟ ಮಾಡಿರುತ್ತೇವೆ.

ಸದರಿ ಖರೀದಿ ಪತ್ರ ನನ್ನ ಗಂಡನ ಹತ್ತಿರ ಇರಬಹುದು. ಸದರಿ ಸಮಯದಲ್ಲಿ ನಮಗೆ ಸುಮಾರು 65 ರಿಂದ 70 ಲಕ್ಷ ರೂ. ಸಾಲ ಇತ್ತು. ಆದರ್ಶ ನಗರದಲ್ಲಿರುವ ಆಸ್ತಿ ಹಾಗೂ ವುಡ್ ಲ್ಯಾಂಡ್  ಹೊಟೇಲ್‌ನಲ್ಲಿರುವ 10 ಗುಂಟೆ ಜಾಗವನ್ನು ಮಾರಾಟ ಮಾಡಿ ಬಂದ ಹಣದಿಂದ ಸದರಿ ಸಾಲ ತೀರಿಸಬಹುದಾಗಿತ್ತು ಎಂದರೆ ಸಾಕ್ಷಿ ನನ್ನ ಯಜಮಾನರಿಗೆ ಬೇರೆ ಖಾಸಗಿ ಸಾಲ ಸಹ ಇತ್ತು ಎಂದು ನುಡಿಯುತ್ತಾರೆ. ನನ್ನ ಗಂಡ 20 ರಿಂದ 25 ಲಕ್ಷ ರೂ. ಅದೇ ರೀತಿ ವುಡ್ ಲ್ಯಾಂಡ್ ಹೊಟೇಲ್ ಪದೇ ಪದೇ ನವೀಕರಣಗೊಳಿಸಲು ಸಹ ನಾವು ಹಣ ತೊಡಗಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ಗಂಡ ಐಶಾರಾಮಿ ಜೀವನ ಸಾಗಿಸಲು ಸಾಲ ಮಾಡುತ್ತ ಆಸ್ತಿಗಳನ್ನು ಮಾರಾಟ ಮಾಡುತ್ತ ಬಂದಿರುತ್ತೇವೆ ಎಂದರೆ ಸರಿಯಲ್ಲ. ವುಡ್ ಲ್ಯಾಂಡ್ಸ ಹೊಟೇಲ್ ನಲ್ಲಿರುವ ಜಾಗ ಮಾರಾಟ ಮಾಡುವಾಗ ನಿಮ್ಮ ಮಗ ಸಮೀರ ಆಕ್ಷೇಪಣೆ ಮಾಡಿದರು ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ.  ವುಡ್ ಲ್ಯಾಂಡ್ಸ ಹೊಟೇಲ್ ನಲ್ಲಿರುವ ಜಾಗಕ್ಕೆ ಒಂದೂವರೆಯಿಂದ ಎರಡು ಕೋಟಿ ಮೊತ್ತ ಬರುತ್ತಿತ್ತು ಎಂದರೆ ಸರಿಯಲ್ಲ. ಆದರೆ ಈಗ ಅಲ್ಲಿ ಬೆಲೆ ಜಾಸ್ತಿಯಾಗಿದೆ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲುಃ  ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು  ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**